ಈ) ಬಾಕಿ ಇರುವ ಆಸ್ತಿ ತೆರಿಗೆ ಪ್ರಮಾಣ ಎಷ್ಟು? ಎಂದು ಈ ಹಣ ವಸೂಲಿ ಮಾಡಲಾಗುವುದು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು):

ಅ) ಹೌದು.

ಆ) ರೂ.67.68 ಕೋಟಿಗಳು ನಿಗಧಿತ ಅವಧಿಯೊಳಗೆ ವಸೂಲಿ ಮಾಡಲಾಗುತ್ತಿದೆ.

ಇ) ಇಲ್ಲ. ವರ್ಗಾವಣೆ ವಿಷಯವು ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ.

ಈ) ರೂ.67.68 ಕೋಟಿಗಳು. ಬಾಕಿ ತೆರಿಗೆಯನ್ನು ತ್ವರಿತವಾಗಿ ವಸೂಲಿ ಮಾಡಲಾಗುವುದು.

ಬೆಂಗಳೂರು ನಗರದಲ್ಲಿ ಆಸ್ತಿ ತೆರಿಗೆ ನೀಡದೇ ಇರುವವರ ಸಂಖ್ಯೆ.

2193(2981)

ಶ್ರೀ ಆರ್.ಅಶೋಕ್ (ಉತ್ತರಹಳ್ಳಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆಸ್ತಿ ತೆರಿಗೆ ನೀಡದೇ ಇರುವವರ ಸಂಖ್ಯೆ ಎಷ್ಟು?

ಆ) ಪಿ.ವಾಸುದೇವ ಸಮಿತಿ ವರದಿಯನ್ನು ಸರ್ಕಾರಕ್ಕೆ ಎಂದು ನೀಡಿದೆ? (ಈ ವರದಿಯ ಪ್ರತಿ ಒದಗಿಸುವುದು)

ಇ) ಈ ವರದಿಯನ್ನು ಅಂಗೀಕರಿಸಲಾಗಿದೆಯೇ?

ಈ) ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು):

ಅ) ಶೇಕಡಾ 35 ರಷ್ಟು.

ಆ, ಇ ಮತ್ತು ಈ) 30-12-1996. ವರದಿಯು ಪರಿಶೀಲನೆಯಲ್ಲಿರುತ್ತದೆ ಮತ್ತು ವರದಿಯ ಪ್ರತಿಯನ್ನು ನಂತರ ಒದಗಿಸಲಾಗುವುದು.